ಕರೆನ್ಸೀ ನೋಟ್‌ಗಳು.

ಯಿದರಡಿ ನಮೂದಿಸಲ್ಪಡುವ ಪೂರಾ ಕರೆನ್ಸಿನೋಟುಗಳು ಚಿಕ್ಕ ಮಗಳೂರು ತಾಲ್ಲೂಕು ಮಾವಿನಕೆರೆಯಲ್ಲಿ ಕಳಕೊಳ್ಳಲ್ಪಟ್ಟಿರುತ್ತೆ. ಈ ಸಂಗತೀಯನ್ನು ಪೇಪರ್‌ಕರೆನ್ಸಿ ಆಫಿಸಿಗೆ ತಿಳಿಯಪಡಿಸಿರುತ್ತೆ, ಯಿವುಗಳನ್ನು ತಂದುಕೊಟ್ಟವರಿಗೆ 50 ರೂಪಾಯಿಗಳ ಇನಾಂ ಕೊಡಲ್ಪಡುತ್ತೆ.

ನಂಬರ್	ಸರ್ಕಲ್	ನೋಟ್ ಮೊಬಲಗ್ ರೂ.	ಆ.	ಪೈ.	ನಂಬರ್	ಸರ್ಕಲ್	ನೋಟ್ ಮೊಬಲಗ್ ರೂ.	ಆ.	ಪೈ.
56286	ಮದ್ರಾಸ್	100	0	0	57900	ಮದ್ರಾಸ್	20	0	0
35313	ಡಿಟೋ	100	0	0	41093	ಡಿಟೋ	20	0	0
54402	ಡಿಟೋ	100	0	0	41605	ಡಿಟೋ	20	0	0
85407	ಡಿಟೋ	100	0	0	56259	ಕಲ್ಲೀಕೋಟೆ	20	0	0
35690	ಡಿಟೋ	100	0	0	53500	ಡಿಟೋ	20	0	0
59352	ಡಿಟೋ	100	0	0	2753	ಡಿಟೋ	10	0	0
2051	ಡಿಟೋ	50	0	0	66082	ಡಿಟೋ	10	0	0
63050	ಡಿಟೋ	50	0	0	17885	ಡಿಟೋ	10	0	0

ಬೆಂಗಳೂರು
15ನೇ ಮಾರ್ಚ್ 1876.

ರುಜು ಶಾಮುಂಣ ಯಂದಿದೆ, ಚಿಕ್ಕ ಮಗಳೂರು ತಾಲ್ಲೂಕು ಮಾವಿನಕೆರೆಯಲ್ಲಿರುವ ಕಲ್ಲಪ್ಪಶೆಟ್ಟರ ಪಜಂಟ್.

ಇದರಡಿ ನಮೂದಿಸಲ್ಪಡುವ ಕರೆನ್ಸಿ ನೋಟುಗಳ ತುಕಡೆಗಳು ಟಪ್ಪಾಲ್‌ದ್ವಾರ ರವಾನೇ ಆಗುತ್ತಿರುವಾಗ್ಯೆ ಹೋಗಿರುತ್ತೆ

ನಂ. $\frac{J}{5}$ 02487	ಮದ್ರಾಸ್ ಸರ್ಕಲ್	ಮೊಬಲಗ್.
ಬಲಭಾಗ	..	500
ನಂ. $\frac{J}{5}$ 59502	ಡಿಟೋ	20
ಬಲಭಾಗ	..	520

ಹಕ್ಕುದಾರ—ಹಾಸನ ಡಿಸ್ಟ್ರಿಕ್ಟ್ ಆರಕಲ್‌ಗೂಡು ತಾಲ್ಲೂಕು ಕಸಬೆಯಲ್ಲಿರುವ ಪಾಳ್ಯದ ಕೊಂಡೈಯಂಕಟ್ಟ.

ಅಂಚೆ ಇಲಾಖಾ.

ನಂ. 650. ತಾರೀಖು 28ನೇ ಮಾರ್ಚ್ 1876.

ಈ ಕೀವೆಯಲ್ಲಿ ಸರ್ಕ್ಯೂಟಿನೊಳಗಿರುವ ಆಫಿಸರ್‌ಗಳು ತಮ್ಮ ಸಂಚಾರವನ್ನು ಕುರಿತು ಅಂಚೇ ಮುತ್ಸದ್ದಿಗಳಿಗಾಗಲಿ, ಪೋಸ್ಟ್ ಮಾಸ್ಟರ್‌ಗಳಿಗಾಗಲಿ, ಸಕಾಲಕ್ಕೆ ತಿಳಿಸಬೇಕಾದ್ದು ಜರೂರೆಂಬ ಅಂಶಕ್ಕೆ ನಿಗೇ ಕೊಡತಕ್ಕದ್ದೆಂದು ಈ ಕೆಳಗೆ ರುಜು ಮಾಡತಕ್ಕವರು ಅಪೇಕ್ಷಿಸುತ್ತಾರೆ, ಯಾತಕ್ಕಂದರೆ ಸದರೀ ಮುತ್ಸದ್ದಿಗಳಿಂದ ಅಥವಾ ಪೋಸ್ಟ್ ಮಾಸ್ಟರ್‌ಗಳಿಂದ ಸದರೀ ಆಫಿಸರ್‌ಗಳು ತಮ್ಮ ಟಪ್ಪಾಲುಗಳನ್ನು ಹೊಂದು ತಿರುತ್ತಾರೆ. ಮತ್ತು ಅವರುಗಳ ಲಕ್ಕೋಟೆಗಳು ವ್ಯರ್ಥವಾಗಿ ಸ್ಥಳದಿಂದ ಸ್ಥಳಕ್ಕೆ ತಿರುಗುವದು, ತಪ್ಪಾಗಿ ರವಾನಿಸಲ್ಪಡುವದು, ಪಾವತೀ ವಿಷಯದಲ್ಲಿ ಸಾವಕಾಶವಾಗುವದು, ಇಂತಾದ್ದನ್ನು ನಿರೋಧಿಸುವ ಬಗ್ಯೆ ಬೆಂಗಳೂರಲ್ಲಿಯೂ, ಧಾರವಾಡದಲ್ಲಿಯೂ, ಯಿರುವ ಹರಮಾಜಸ್ಟ್ಯೀ ಟಪ್ಪಾಲ್ ಆಫಿಸ್‌ಗಳಿಂದ ಮೈಸೂರಲ್ಲಿ ಪಾವತೀ ಬಗ್ಯೆ ಬರತಕ್ಕಂತಾ ಓವರ್‌ಲ್ಯಾಂಡ್ ಮತ್ತು ಇಂಲ್ಯಾಂಡ್ ಲಕ್ಕೋಟೆಗಳು ವಗೈರೇ ಬೆಂಗಳೂರು ವಿಭಾಗದಲ್ಲಿರುವ ಹೆಡ್ ಅಂಚೇ ಕಚ್ಚೇರಿಗಳಿಗೂ, ತಿಳಿಸತಕ್ಕದ್ದಿದೆ.

ಮತ್ತು ಕೋರುವದೇನಂದರೆ, ಲಕ್ಕೋಟೆ ಮೇಲೆ ಬರಿಯತಕ್ಕ ವಿಳಾಸಗಳು ಕನ್ನಡದಲ್ಲಿಯೂ ಇಂಗ್ಲೀಷ್‌ನೊಳಗೂ ಸ್ಪಷ್ಟವಾಗಿ ಬರಿಯತಕ್ಕದ್ದು.

ತಾರೀಖು 27ನೇ ಮಾರ್ಚೀ 1876.

ಇದರಿಂದ ಸರ್ವಜನರಿಗೂ ತಿಳಿಯುವಬಗ್ಗೆ ಪ್ರಕಟಿಸುವದೇನಂದರೆ,—ಬಳ್ಳಾರೀ ಡಿಸ್ಟ್ರಿಕ್ಟ್ ಪೈಕೀ ಹಿಂದೂಪುರದಲ್ಲಿ ಸ್ಯ 1876ನೇ ಇಸವಿ ಏಪ್ರೀಲ್ ಗುರ್ತೀ ಲಾಗಾಯತು ಒಂದು ಇಂಪೀರಿಯಲ್ ಪೋಸ್ಟ್ ಆಫಿಸ್ ಸ್ಥಾಪಿಸಲ್ಪಡುವದರಿಂದ ಮೈಸೂರು ೀಮೆಯ ಕೋಲಾರ್ ಡಿಸ್ಟ್ರಿಕ್ಟ್ ಪೈಕೀ ಗೋರೀಬಿದನೂರಲ್ಲಿರುವ ಅಂಚೇ ಕೆಚ್ಚೇರಿಯು ಹಿಂದೂಪುರದಲ್ಲಿ ಟಪ್ಪಾಲ್ ಆಫಿಸ್ ಸಹ ಪೈಡ್ ಬಾಬತು ರಿಜಿಸ್ಟರ್ ಆದ ಲಕ್ಕೋಟೆಗಳು, ಪಾರ್ಸೆಲ್‌ಗಳು, ಮತ್ತು ಪೈಡ್ ಲಕ್ಕೋಟೆಗಳು ಯಿವುಗಳನ್ನು ಬದಲಾಇಸಿಕ್ಕೊಳ್ಳುತ್ತವೆ ಆದರೆ, ನಪೈಪೈಡ್ ಬಾಬತು ಲಕ್ಕೋಟೆಗಳು ಇದುವರಿಗೆ ನಡದು ಬಂದಂತೆಯೇ ಬೆಂಗಳೂರು ಅಂಚೇ ಮೂರೀಫತ್ತೇ ರವಾನಿಸಲ್ಪಡುತ್ತಾ ಯಿರುವೆವು.

M. AMURTALINGAM,
Anche Bakshi.

ಪೊಲೀಸ್ ಇಲಾಖಾ.

ತಾರೀಖು 27ನೇ ಮಾರ್ಚೀ 1876.

ಸರ್ಕ್ಯುಲರ್ ನಂಬರ್ 3671–189.

ಮೂಹ ಮಜಕೂರ್ 4ನೇ ಮುರ್ತುಂ 1256ನೇ ನಂಬರ್ ಸರ್ಕ್ಯುಲರನ್ನು ಕುರಿತು ಇದರ ದೆಕೆಯಿಂದ ಹುಕ್ಕುಂ ಮಾಡುವದೇನಂದರೆ ಇನ್ಸ್‌ಪೆಕ್ಟರ್‌ಗಳು ತಮ್ಮ ಜನಕ್ಕೆ ಕೂಡಿದಷ್ಟು ತ್ವರೆಯಾಗಿ ಖುದ್ದು ಬಟವಾಡೆ ಮಾಡತಕ್ಕದ್ದು.

2 ಹಾಂಗೆ ಮಾಡಲು ಅಡ್ಡಿ ಸಂಭವಿಸಿದರೆ ಜಮೇದಾರನ್ನ ಆ ಬಗ್ಗೆ ಕಳುಹಿಸಬಹುದು, ಅದರೆ ಅವನಿಗಿಂತ ಕಮ್ಮಿ ಹುದ್ದೇ ಆಫಿಸರನ್ನ ಕಳುಹಿಸಕೂಡದು. ಅಂತಾ ಸಂದರ್ಭಗಳಲ್ಲಿ ಇನ್ಸ್‌ಪೆಕ್ಟರಾಗಲಿ ಸಬ್ ಇನ್ಸ್‌ಪೆಕ್ಟರಾಗಲಿ, ತಲಬು ಸಲ್ಲತಕ್ಕ ತಮ್ಮಾಂ ಜನಗಳಿಗೂ ಸಂದಿರುತ್ತೆಂಬದಾಗಿ ತಾವೇ ಖುದ್ದು ಸಮಾಧಾನ ಪಡಬೇಕು.

3 ತಲಬು ಬಟವಾಡೆ, ಮತ್ತು ಯಾರಿಂದ ಬಟವಾಡೆ ಮಾಡಲ್ಪಟ್ಟಿತು, ಅದನ್ನು ಆಯಾ ದಿನದ ಸ್ಟೇರ್ಷ ವ ಸಬ್ ಸ್ಟೇರ್ಷ ಡೈರಿಗಳಲ್ಲಿ ರಿಪೋರ್ಟು ಮಾಡುಕ್ಕದ್ದು.

4. ಬರಾವರ್ದು ಪಟ್ಟೀಯನ್ನು ಕಳುಹಿಸುವಲ್ಲಿ ಇನ್ಸ್‌ಪೆಕ್ಟರಾಗಲಿ, ಸಬ್ ಇನ್ಸ್‌ಪೆಕ್ಟರಾಗಲಿ, ಸದರೀ ಬರಾವರ್ದಿನ ಕೆಳಗೆ ಆ ಹಿಂದಿನ ತಿಂಗಳ ತಲಬು ನಿಷ್ಪ ವೂ ಬಟವಾಡೆ ಮಾಡಿರುತ್ತೆಂದು ಸರಟಫ್ಕೆ ಮಾಡಬೇಕು. ಹಾಗೆ ಯಿಲ್ಲದಿದ್ದರೆ ಅಸಂದರ್ಭವಾದ ಸಂಗತಿಯನ್ನ ತಿಳಿಸತಕ್ಕದ್ದಲ್ಲದೆ ಪೊಲೀಸ್ ಅಸಿಸ್ಟೆಂಟರ ಜಾಹೀರಾತೀ ಬಗ್ಗೆ ಸಂಜಾಯಿಸಿ ವಿವೊರಾಂಡಂ ಬರದು ಕೊಡತಕ್ಕದ್ದು.

5. ಜನಗಳಿಗೆ ಶೀಘ್ರವಾಗಿಯೂ ಕ್ರಮವಾಗಿಯೂ ತಲಬು ವಗೈರೆ ಬಟವಾಡೆ ಆಗತಕ್ಕ ವಿಷಯದಲ್ಲಿ ಪೊಲೀಸ್ ಅಸಿಸ್ಟೆಂಟರು ಸರ್ವ ಪ್ರಯತ್ನ ಮಾಡತಕ್ಕದ್ದು. ಮತ್ತು ಸರಕ್ಯೂಟ್ ಮಾಡುವಲ್ಲಿ. ಯಾರಿಗಾದರೂ ತಲಬು ಸಲ್ಲದೆ ಯಿರುತ್ತೆಯೇ ಯಿಲ್ಲವೆ ಯಂಬದನ್ನು ಯಾವಾಗಲೂ ಖುದ್ದು ತನಿಖಿ ಮಾಡತಕ್ಕದ್ದು.

H. T. PRINSEP,
Offg. Inspector General of Police.

MYSORE GOVERNMENT PRESS, BANGALORE—1876.